ಇ) ಸದರಿ ಸೆಸ್ಸನ್ನು ವರ್ತಕರು ಸರ್ಕಾರಕ್ಕೆ ನೀಡಿರುವರೇ, ನೀಡದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಈ) ಇದರಿಂದಾಗಿ 1988ರಿಂದ ಸುಮಾರು 5 ವರ್ಷಗಳ ಕಾಲ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವೆಷ್ಟು?

ಉ) ಇದನ್ನು ವಸೂಲಿ ಮಾಡಲು ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ಹೌದು.

ಆ) ರಾಜ್ಯ ಸರ್ಕಾರಕ್ಕೆ ಯಾವ ಸೆಸ್ಸನ್ನೂ ಬೇಳೆಕಾಳು ವರ್ತಕರು ನೀಡಬೇಕಾಗಿಲ್ಲ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ 1996ರ ಮೇರೆಗೆ ಬೇಳೆಕಾಳು ವರ್ತಕರು ಬೇಳೆ-ಕಾಳುಗಳನ್ನು ಖರೀದಿಸುವವರಿಂದ ಶೇಕಡ 1ರಷ್ಟು ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಿ ಅದನ್ನು ಮಾರುಕಟ್ಟೆ ಸಮಿತಿಗೆ ಜಮಾ ಮಾಡಬೇಕಾಗುವುದು.

ಇ) ಬೇಳೆಕಾಳು ವರ್ತಕರು ರಾಜ್ಯ ಸರ್ಕಾರಕ್ಕೆ ಮಾರುಕಟ್ಟೆ ಶುಲ್ಕ ತುಂಬುವಂತಿಲ್ಲ. ಆದರೆ, ಅವರು ಬೇಳೆಕಾಳುಗಳನ್ನು ಖರೀದಿಸುವವರಿಂದ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು, ಇದಕ್ಕೆ ತುಂಬಬೇಕು. 1988ರಿಂದ 1996ರ ಅವಧಿ-ಯಲ್ಲಿ ಬೇಳೆಕಾಳುಗಳ ಮೇಲೆ ವಸೂಲಿ ಮಾಡಿರುವ ಮಾರುಕಟ್ಟೆ ಶುಲ್ಕ ಈ ಕೆಳಗಿನಂತಿದೆ.

1988–89	ರೂ.	10,43,435.00
1989–90	ರೂ.	16,21,683.00
1990–91	ರೂ.	23,35,113.00
1991–92	ರೂ.	40,25,212.00
1992–93	ರೂ.	46,98,581.00
1993–94	ರೂ.	85,65,241.00
1994–95	ರೂ.	1,04,77,455.00
1995–96	ರೂ.	1,30,99,044.00

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಮೇರೆಗೆ ಬೇಳಿಕಾಳು ವರ್ತಕರು ಆಗಸ್ಟ್ 1992ರಲ್ಲಿ ಯಶವಂತಪುರ ಮಾರುಕಟ್ಟೆ ಪ್ರಾಂಗಣಕ್ಕೆ ತಮ್ಮ ವಹಿವಾಟನ್ನು ಸ್ಥಳಾಂತರಿಸಿ ಮಾರುಕಟ್ಟೆ ಶುಲ್ಕವನ್ನು ತುಂಬುತ್ತಿದ್ದಾರೆ. 1988–92ರ ಅವಧಿಗೆ ತುಂಬಬೇಕಾದ ಬಾಕಿ ಮಾರುಕಟ್ಟೆ ಶುಲ್ಕಕ್ಕೆ ಸಂಬಂಧಿಸಿದಂತೆ ಬೇಳೆಕಾಳು ವರ್ತಕರ ಸಂಘ ಹಾಗೂ ಇತರೆ ವರ್ತಕರು ಮಾರುಕಟ್ಟೆ ಕಾಯ್ದೆಯ ಪ್ರಕರಣ 132(2)ರ ಮೇರೆಗೆ ಕೃಷಿ ಮಾರಾಟ ನಿರ್ದೇಶಕರಿಗೆ ಮೇಲ್ಮನವಿಗಳನ್ನು ಸಲ್ಲಿಸಿದ್ದಾರೆ. ಬೇಳೆಕಾಳು ವರ್ತಕರಿಂದ ಬರಬೇಕಾದ ಬಾಕಿ ಮಾರುಕಟ್ಟೆ ಶುಲ್ಕವನ್ನು ನಿರ್ಧರಿಸಲು ಕ್ರಮಗಳನ್ನು ಜರುಗಿಸಲಾಗುತ್ತಿದೆ. ಇನ್ನೂ ಹಲವಾರು ರಿಟ್ ಅರ್ಜಿಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಬಾಕಿ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲು ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲು ಸಾಧ್ಯವಾಗುತ್ತಿಲ್ಲ.

ಈ) ಈ ವಿಷಯದ ಬಗ್ಗೆ ವಿವಾದಗಳು ಉದ್ಭವಿಸಿದ್ದು ಮತ್ತು ಹಲವಾರು ವ್ಯಾಜ್ಯಗಳು ನ್ಯಾಯಾಲಯದಲ್ಲಿರುವುದರಿಂದ ಬಾಕಿ ಮಾರುಕಟ್ಟೆ ಶುಲ್ಕ ವಸೂಲಿ ಮಾಡಲು ಕಾನೂನಿನಂತೆ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಆದುದರಿಂದ ಸರ್ಕಾರಕ್ಕೆ ನಷ್ಟ ಉಂಟಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ವರ್ತಕರು ಕೃಷಿ ಮಾರಾಟ ನಿರ್ದೇಶಕರಿಗೆ ಸಲ್ಲಿಸಿರುವ ಮೇಲ್ಮನವಿಗಳನ್ನು ಪರಿಶೀಲಿಸಿ ಬೇಳೆಕಾಳು ವರ್ತಕರಿಂದ ಬರಬೇಕಾದ ಬಾಕಿ ಮಾರುಕಟ್ಟೆ ಶುಲ್ಕವನ್ನು ನಿರ್ಧರಿಸಲು ಕ್ರಮ ಜರುಗಿಸಲಾಗುತ್ತಿದೆ. ಬಾಕಿ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಉಪಾಧ್ಯಕ್ಷರೆ, ನೋಟೀಫಿಕೇಷನ್ ಈ ರೀತಿ ಇದೆಯೇ ಎಂದು ಕೇಳಿದಾಗ, ಇದೆಯೆಂದು ಹೇಳಿದ್ದಾರೆ. ಅದೇರೀತಿ 1988ರಿಂದ 1996ರವರೆಗೆ ನಾನು ಇಲ್ಲಿ ಟೋಟಲ್ ಮಾಡಿದ್ದೇನೆ 4 ಕೋಟಿ 57 ಲಕ್ಷ 65 ಸಾವಿರದ 764 ರೂಪಾಯಿಗಳನ್ನು ಇವತ್ತು ಈ ಮಾರ್ಕೆಟ್ ವರ್ತಕರು ಏನಿದ್ದಾರೆ ಅವರ ಕೈಯಲ್ಲಿ ಬಿಟ್ಟಿದ್ದೀರಿ ಎನ್ನತಕ್ಕದ್ದು ಸ್ಪಷ್ಟವಾಗಿದೆ. 1988ನೇ ಇಸವಿಯಿಂದ 1996ನೇ ಇಸವಿವರೆಗೆ ಈ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ವರ್ತಕರು ಪರ್ಚೇಸರ್ ಹತ್ತಿರದಿಂದ ವಸೂಲಿ ಮಾಡಿದ್ದಾರೆ. ಹೈಕೋರ್ಟಿನಲ್ಲಿ 1992ನೇ ಇಸವಿಯಲ್ಲಿ ರಿಟ್‌ಪಿಟಿಷನ್ ವಜಾ ಆಗಿದೆ. 1992ನೇ ಸಾಲಿನಿಂದ ಇವತ್ತಿನವರೆಗೂ ಕೂಡ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡು ಹಣವನ್ನು ವಸೂಲಿ ಮಾಡಿಲ್ಲ. ತಾವು ಅಪೀಲ್ ಹಾಕಿದ್ದಾರೆ ಎಂದು ಉತ್ತರ ಕೊಟ್ಟಿದ್ದೀರಿ. ನಾನು ಎರಡು ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ, ನನಗೆ ಗೊತ್ತಿರುವ ಹಾಗೆ ಈ ವಸೂಲಾತಿಯ ಬಗ್ಗೆ ಯಾವ ಕೋರ್ಟಿನಲ್ಲೂ ಕೂಡ ಪೆಂಡಿಂಗ್ ಕೇಸ್‌ಗಳು ಇಲ್ಲ. ಹೈಕೋರ್ಟ್‌ನಲ್ಲಿ ಯಾವುದಾದರೂ ಕೇಸು ಇದೆ ಎನ್ನುವುದಾದರೆ, ಸ್ಟೇ ಇದೆಯೇ? ಯಾರು ಕೇಸ್ ಹಾಕಿದ್ದಾರೆ? ಮತ್ತೆ ನೀವು ಅಪೀಲು ಹಾಕಿದ್ದೇವೆಂದು ಹೇಳಿದ್ದೀರಿ, ಅಪೀಲು ಹಾಕಿದ್ದರೆ, ಅಪೀಲು ಹಾಕುವುದಕ್ಕೆ ಅವರಿಗೆ ಅವಕಾಶವಿದೆಯೇ? ಅಪೀಲು ಮೇಲೆ ಏನಾದರೂ ಸ್ಟೇ ಕೊಟ್ಟಿ-

ದ್ದಾರೆಯೇ? ಒಂದು ವೇಳೆ ಸ್ಟೇ ಕೊಡದಿದ್ದರೆ ನಾಲ್ಕೂವರೆ ಕೋಟಿ ರೂಪಾಯಿಗಳ ಹಣವನ್ನು ಇವತ್ತು ವಸೂಲಿ ಮಾಡದಿರುವುದಕ್ಕೆ ಏನು ಕಾರಣ? ಆ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ? ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಹೆಚ್. ನಾಗಪ್ಪ:- ಮಾನ್ಯ ಉಪಾಧ್ಯಕ್ಷರೆ, 1988ರಲ್ಲಿ ಒಟ್ಟು 359 ಕೇಸುಗಳು ಹೈ-ಕೋರ್ಟ್‌ನಲ್ಲಿವೆ. ಅದರಲ್ಲಿ 1992ರಲ್ಲಿ 180 ಕೇಸುಗಳು ತೀರ್ಮಾನವಾಗಿದೆ. 1993–96ರವರೆಗೆ 18 ಕೇಸುಗಳು ತೀರ್ಮಾನವಾಗಿದೆ. ದಿನಾಂಕ 23–7–96ರಲ್ಲಿ 105 ಕೇಸುಗಳು ತೀರ್ಮಾನವಾಗಿ ಒಟ್ಟು 303 ಕೇಸುಗಳು ತೀರ್ಮಾನವಾಗಿ ಇನ್ನೂ ಕೂಡ 56 ಕೇಸುಗಳು ಕೋರ್ಟಿನಲ್ಲಿ ಉಳಿದಿವೆ. ಅವು ಇನ್ನು ತೀರ್ಮಾನವಾಗಿಲ್ಲ. ನಾವು ಹಣವನ್ನು ಕಲೆಕ್ಟ್ ಮಾಡಿದ್ದೇವೆ. ಅದರಲ್ಲಿ ಬಾಕಿ ಉಳಿದಿಲ್ಲ. ನಾವು ದಲಾಲರಿಂದ ಹಣವನ್ನು ಕಲೆಕ್ಟ್ ಮಾಡಿಕೊಂಡಿದ್ದೇವೆ. ಸ್ವಲ್ಪ ಹಣ ಬಾಕಿಯಿದೆ. ಸುಮಾರು 2 ಲಕ್ಷದ 29 ಸಾವಿರ ರೂಪಾಯಿ ಬಾಕಿಯಿದೆ. ಅದನ್ನೂ ಕೂಡ ವಸೂಲಿ ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಹಲವಾರು ಕೇಸುಗಳು 1992ರಲ್ಲಿ ಮುಗಿದಿವೆ. ಮುಗಿದ ನಂತರ ಆ ವರ್ತಕರಿಂದ ಹಣವನ್ನು ಏಕೆ ವಸೂಲಿ ಮಾಡಲಿಲ್ಲ? ನನಗೆ ಗೊತ್ತಿದೆ ನಾಲ್ಕು ಕೋಟಿ ಚಿಲ್ಲರೆ ಹಣವನ್ನು ಇವತ್ತಿನವರೆಗೂ ವಸೂಲಿ ಮಾಡಿಲ್ಲ. ಅಧಿಕಾರಿ-ಗಳು ಮತ್ತು ವರ್ತಕರು ಇದರಲ್ಲಿ ಶಾಮೀಲಾಗಿದ್ದಾರೆ. 1988ನೇ ಇಸವಿಯಿಂದ ಇವತ್ತಿನವರೆಗೂ ಕೂಡ ಒಬ್ಬ ವರ್ತಕನಿಗೂ ಕೂಡ ನೋಟೀಸ್ ಕೊಟ್ಟು ಹಣವನ್ನು ವಸೂಲಿ ಮಾಡಿಲ್ಲ. ಅದು ವರ್ತಕರ ಹಣ ಅಲ್ಲ. ಪರ್ಚೇಸರ್ ಅವರಿಂದ ವಸೂಲಿ ಮಾಡಿ ಅವರು ಹಣ ಇಟ್ಟುಕೊಂಡಿರತಕ್ಕದ್ದು ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ? ಆ ನಾಲ್ಕು ಕೋಟಿ ರೂ. ಗಳ ಹಣವನ್ನು ಬಡ್ಡಿಗೋಸ್ಕರ ಇಟ್ಟಿದ್ದರೆ ಅದು ಇವತ್ತು 8 ಕೋಟಿ ಹಣ ಆಗುತ್ತಿತ್ತು. ಆದ್ದರಿಂದ ಇದರ ಬಗ್ಗೆ ಯಾರು ಜವಬ್ದಾರಿಯನ್ನು ತೆಗೆದು ಕೊಂಡಿದ್ದಾರೆ? ಆ ಅಧಿಕಾರಿಗಳ ಮೇಲೆ ಏನಾದರೂ ತಾವು ಕ್ರಮ ತೆಗೆದುಕೊಳ್ಳುತ್ತೀರಾ? ಇದನ್ನು ತಾವು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಯಾವ ಕೋರ್ಟಿನಲ್ಲಿ ಕೂಡ ಒಂದು ಸಾರಿ ತೀರ್ಮಾನ-ವಾದ ಮೇಲೆ 1992ನೇ ಇಸವಿಯಲ್ಲಿ ತೀರ್ಮಾನವಾದ ಮೇಲೆ ಮಿಕ್ಕಿದ ಕೇಸುಗಳ ಬಗ್ಗೆ ತಾವು ಗಮನಕ್ಕೆ ತೆಗೆದುಕೊಂಡು ವಜಾ ಮಾಡಿಸಬೇಕಾಗಿತ್ತು. ಇದು ತಮ್ಮ ಸರ್ಕಾರಿ ವಕೀಲರ ಕರ್ತವ್ಯ. 1992ನೇ ಇಸವಿಯಿಂದ ಅಲ್ಲೇ ಕೇಸು ಇಟ್ಟುಕೊಂಡು, ಸ್ಟೇ ಇರಬಹುದು, ಯಾರ ಮೇಲೆ ಸ್ಟೇ ಇತ್ತೋ ಅವರಿಂದ ವಸೂಲಿ ಮಾಡಲಿಕ್ಕೆ ಬರುತ್ತಿರಲಿಲ್ಲ. ಆದರೆ ಸ್ಟೇ ಇಲ್ಲದಿರತಕ್ಕ ಕೇಸುಗಳು 350; ಆ ಕೇಸುಗಳಲ್ಲಿ ತಾವು ಏಕೆ ವಸೂಲಿ ಮಾಡಿಲ್ಲ? ಇದನ್ನು ತಾವು ಹೇಳಬೇಕಾಗುತ್ತದೆ. ಇದು ಸರ್ಕಾರದ ಹಣ.

ಶ್ರೀ ಹೆಚ್. ನಾಗಪ್ಪ:- ನಾಲ್ಕು ಕೋಟಿ ಹಣವನ್ನು ವಸೂಲಿ ಮಾಡಿದ್ದೇವೆ. ಬಾಕಿ ಅವರ ಹತ್ತಿರ ಇಲ್ಲ. ಬಾಕಿ ಇರತಕ್ಕವರ ಲಿಸ್ಟನ್ನು ಕೂಡ ಮಾಡಿದ್ದೇವೆ. ಆ ಲಿಸ್ಟನ್ನು ತಮಗೆ ಬೇಕಾದರೆ ಕಳುಹಿಸಿ ಕೊಡುತ್ತೇನೆ. ಇನ್ನು 29 ಲಕ್ಷ ರೂಪಾಯಿಗಳು ಹೆಚ್ಚು ಕಡಿಮೆ ನಮಗೆ ಬರಬೇಕಾಗುತ್ತದೆ. ಆದರ ಬಗ್ಗೆ ನಾವು ಒಂದು ಕಮಿಟಿಯನ್ನೂ ಸಹ ಮಾಡಿದ್ದೇವೆ. ಜಾಯಿಂಟ್ ಡೈರೆಕ್ಟರ್ ಆಫ್ ಮಾರ್ಕೆಟಿಂಗ್ ಕಮಿಟಿ ಬೆಂಗಳೂರು, ಡೆಪ್ಯುಟಿ ಡೈರೆಕ್ಟರ್ ಎನ್‌ಫೋರ್ಸ್‌ಮೆಂಟ್, ಡೆಪ್ಯುಟಿ ಡೈರೆಕ್ಟರ್ ಅಡ್ಮಿನಿ-ಸ್ಟ್ರೇಷನ್ ಈ ಮೂರು ಜನರ ಒಂದು ಕಮಿಟಿಯನ್ನು ಮಾಡಿ ಆ ಕಾಲದಲ್ಲಿ 1988ರಿಂದ 96ರವರೆಗೆ ಯಾರ್ಯಾರು ಕೊಡಬೇಕು ಎನ್ನುವುದನ್ನು ಒಂದು ಲಿಸ್ಟ್ ಮಾಡಿ ಕಮಿಟಿಯವರು ಒಂದು ತೀರ್ಮಾನ ಮಾಡಿ ಒಂದು ಪಟ್ಟಿಯನ್ನು ಸಹ ಕೊಟ್ಟಿದ್ದಾರೆ. ಆದರಂತೆ ನಮಗೆ ಸುಮಾರು 28 ಲಕ್ಷ ರೂಪಾಯಿ ಬರಬೇಕಾಗುತ್ತದೆ. ಅದನ್ನೂ ಕೂಡ ವಸೂಲಿ ಮಾಡುವುದಕ್ಕೆ ನಾವು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಉಪಾಧ್ಯಕ್ಷರೆ, ನಾನು ದಯವಿಟ್ಟು ಹೇಳುತ್ತಿದ್ದೇನೆ ಅದು 29 ಲಕ್ಷ ಅಲ್ಲ. ರೆಕಾರ್ಡ್ ದಯವಿಟ್ಟು ಸರಿಪಡಿಸಿ. ಅಧಿಕಾರಿಗಳಿಗೆ ಹೇಳಿ, ಇದು 29 ಲಕ್ಷ ಅಲ್ಲ. ಇದಕ್ಕಿಂತ ಹೆಚ್ಚಾಗಿ ಕೋಟ್ಯಾಂತರ ರೂಪಾಯಿ ಬರಬೇಕಾಗಿದೆ. ವರ್ತಕರ ಪಟ್ಟಿಯನ್ನು ಕೂಡ ಹಿಂದೆ ಇದ್ದಂತಹ ಮಂತ್ರಿಗಳವರ ಗಮನಕ್ಕೆ ತಂದಿದ್ದೇನೆ. ಎಷ್ಟು ಜನ ಕೊಡಬೇಕೆಂದು ಹೇಳಿದ್ದೇನೆ. ನಿಮ್ಮ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟು ಈ ಸದನದಲ್ಲಿ ಕೇವಲ 29 ಲಕ್ಷ ಬರ-ಬೇಕೆಂದು ಹೇಳಿಸಿದರೆ ಅದು ಮಾಹಿತಿಯಾದೀತು. ಆ ಬಗ್ಗೆ ಸರಿಯಾದ ಮಾಹಿತಿಯನ್ನು ತರಿಸಿ-ಕೊಂಡು 1988ರಿಂದ ತರಗುಪೇಟೆಯಲ್ಲಿದ್ದಂತಹ ವ್ಯಾಪಾರಸ್ಥರು 1994ನೇ ಇಸವಿಯವರೆಗೂ ಕೂಡ ಅಲ್ಲಿಗೆ ಬಂದಿಲ್ಲ. ಇನ್ನೂ ಹಲವಾರು ವರ್ತಕರು ಅಲ್ಲೇ ಇದ್ದಾರೆ. ಅಲ್ಲೇ ವ್ಯಾಪಾರವನ್ನು ಇವತ್ತು ಕೂಡ ಮಾಡುತ್ತಿದ್ದಾರೆ. ಅವರಿಂದ ವಸೂಲಿ ಕೂಡ ಮಾಡುತ್ತಿಲ್ಲ. ದಯವಿಟ್ಟು ಆದರ ಬಗ್ಗೆ ಮಾಹಿತಿಯನ್ನು ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಮಾಹಿತಿ ತರಿಸಿ ಕೊಡಿ.

ಶ್ರೀ ಹೆಚ್. ನಾಗಪ್ಪ:- ಮಾಹಿತಿ ತರಿಸಿಕೊಡಬೇಕೆಂದು ಕೇಳಿದ್ದಾರೆ, ತರಿಸಿಕೊಡುತ್ತೇನೆ.

ಶ್ರೀ ಬಸವನಗೌಡ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ ಈ ಒಕ್ಕಲುತನ ಮಾರಾಟ ಸಮಿತಿ-ಯಿಂದ ಎಕರೆಗೆ ಎರಡರಷ್ಟು ಏನು ಸೆಸ್ ಮಾಡಿದ್ದಾರೆ, ನಿಜವಾಗಿಯೂ ಇದು ರೈತರಿಗೆ ದುಷ್ಪರಿಣಾಮ ಮಾಡುತ್ತಿದೆ. ವಿಶೇಷವಾಗಿ ಕರ್ನಾಟಕದ ಗಡಿ ಭಾಗದಲ್ಲಿರುವಂತಹ ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳನ್ನು ಉದಾಹರಣೆಗೆ ತೆಗೆದುಕೊಂಡರೆ, ರೈತರು ತಮ್ಮ ಸರಕನ್ನು ಮಹಾರಾಷ್ಟ್ರದಲ್ಲಿ ಮಾರಾಟ ಮಾಡುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಬಿಜಾಪುರ ಒಂದು ಉದಾಹರಣೆಗೆ

ತೆಗೆದುಕೊಂಡರೆ ವರ್ಷಕ್ಕೆ ಕೋಟ್ಯಾಂತರ ರೂಪಾಯಿ ವ್ಯವಹಾರ ಇವತ್ತು ಮಹಾರಾಷ್ಟ್ರಕ್ಕೆ ವರ್ಗಾವಣೆಯಾಗುತ್ತಿದೆ ದಯವಿಟ್ಟು ಸರ್ಕಾರ ಹೆಚ್ಚಿನ ಕರ ವಿಧಿಸುವುದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿದೆ. ದಯವಿಟ್ಟು ಸರ್ಕಾರದವರು ಒಂದು ಪರ್ಸೆಂಟ್ ಏನಿತ್ತು ಹಿಂದೆ ಅದನ್ನು ಮುಂದುವರಿಸುತ್ತಾರೆಯೇ ಎಂದು ಕೇಳಬಯಸುತ್ತಿದ್ದೇನೆ.

ಶ್ರೀ ಹೆಚ್. ನಾಗಪ್ಪ:- ಪರಿಶೀಲನೆ ಮಾಡುತ್ತೇನೆ.

ವಿಷಯ:- ಬೆಂಗಳೂರು–ಶಿವಮೊಗ್ಗ ಮಾರ್ಗದಲ್ಲಿ ಖಾಸಗಿ ಬಸ್‌ಗಳ ಓಡಾಟ.

372 (1791) **ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು–ಶಿವಮೊಗ್ಗ ಮಾರ್ಗವಾಗಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ಪರವಾನಗಿಯನ್ನು ಸರ್ಕಾರದವರು ನೀಡಿರುವುದು ನಿಜವೇ?

ಆ) ನೀಡಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?

ಇ) ರಾಷ್ಟ್ರೀಯ ಪರವಾನಗಿ ಪಡೆದು ನಿಗದಿತ ಮಾರ್ಗಗಳಲ್ಲೂ ಖಾಸಗಿ ಬಸ್ಸುಗಳು ಸಂಚಾರ ನಡೆಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ಅನಧಿಕೃತವಾಗಿ ಸಂಚರಿಸುತ್ತಿರುವ ಬಸ್ಸುಗಳಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಪ್ರಮಾಣವೆಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) 12

ಇ) ಹೌದು.

ಈ) ಮೋಟಾರು ವಾಹನ ತೆರಿಗೆ ಪಾವತಿ ಮಾಡುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಶಿವಮೊಗ್ಗ ಮಾರ್ಗವಾಗಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ಪರವಾನಗಿಯನ್ನು ಸರ್ಕಾರದವರು ಕೊಟ್ಟಿದ್ದಾರೆಯೇ ಎಂದು ಕೇಳಿದ್ದೇನೆ. ಅದಕ್ಕೆ 'ಹೌದು' ಎಂದು ಹೇಳಿದ್ದಾರೆ. ನೀಡಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 'ಹನ್ನೆರಡು' ಎಂದು ಹೇಳಿದ್ದಾರೆ. ನಾನು ಶಾಸಕನಾಗಿ ಇಲ್ಲಿ ಉತ್ತರವನ್ನು ನೋಡಿದರೆ ಹನ್ನೆರಡಕ್ಕಿಂತ ಜಾಸ್ತಿ ಬಸ್ಸುಗಳು ಓಡಾಡುತ್ತಾ ಇವೆ. ಈ ಖಾಸಗಿ ಬಸ್ಸುಗಳಲ್ಲಿ, ಏನು ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನವರು ಒಂದು ಪ್ರಯಾಣದರವನ್ನು ನಿಗದಿ ಮಾಡಿದ್ದಾರೆ, ಆದರ ಎರಡು ಪಟ್ಟು ಹಣ ತೆಗೆದುಕೊಳ್ಳುತ್ತಾರೆ. ಮಾನ್ಯ ಸಚಿವರು ಅದನ್ನು ಪರಿಶೀಲಿಸಬೇಕು. ಖಾಸಗಿ ಬಸ್ಸುಗಳು